ಇಂದು ದಿನಾಂಕಃ 10.03.2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 4 ನೇ ಪ್ರತಿವಾದಿಯ ವಾರಸುದಾರರ ಪರ ವಕೀಲರಿಂದಃ ದಾವಾ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದರೆ ನನ್ನ ತಾತಾ ಸಿದ್ದಚಾರಿಗೆ ಸೇರಿದ ಆಸ್ತಿಯಾಗಿರುತ್ತದೆ. ಪ್ರಸ್ತುತ ದಾವೆಗೆ ಸಂಬಂಧಿಸಿದಂತೆ **2009** ರಲ್ಲಿ ತೀರ್ಮಾನವಾಗಿರುವ ವಿಚಾರ ಗೊತ್ತೇ ಎಂದರೆ ಗೊತ್ತಿಲ್ಲ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿದ ನಂತರ ಸದರಿ ವಿಚಾರಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿಲ್ಲ. ನಿಮ್ಮ ತಂದೆ ದಾವೆಯನ್ನು ದಾಖಲಿಸಿರುವ ವಿಚಾರ ಗೊತ್ತೇ ಎಂದರೆ **2009** ರ ನಂತರ ಗೊತ್ತಾಗಿರುತ್ತದೆ. ಸದರಿ ದಾವೆಯಲ್ಲಿರುವ ಪ್ರತಿವಾದಿಗಳೇ ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳಾಗಿರುತ್ತಾರೆ ಎಂದರೆ ಸದರಿ ದಾವೆಯ ಮೂರು ಜನರು ಮಾತ್ರ ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳಾಗಿರುತ್ತಾರೆ . **1** ನೇ ಪ್ರತಿವಾದಿ ಗಂಗಾಧರಚಾರ್ ಸಹ ಸದರಿ ದಾವೆಯಲ್ಲಿ ಪ್ರತಿವಾದಿಯಾಗಿದ್ದರು ಎಂದರೆ ಸರಿ. ಸದರಿ ದಾವೆ ಯಾವ ಕಾರಣಕ್ಕಾಗಿ ವಜಾ ಆಗಿರುತ್ತದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ನನ್ನ ಅಣ್ಣತಮ್ಮಂದಿರಿಗೆ ಮಾತ್ರ ದಾವಾ ಆಸ್ತಿ ಸೇರುತ್ತದೆ ಎಂದು ಆದೇಶ ಮಾಡಿದ್ದರಿಂದ ನಾನು ಪ್ರಸ್ತುತ ದಾವೆಯನ್ನು ಘೋಷಣಾತ್ಮಕ ಪರಿಹಾರ ಕೋರಿ ಸಲ್ಲಿಸಿರುತ್ತೇನೆ.

ಪ್ರಸ್ತುತ ದಾವೆಯಲ್ಲಿ ಯಾವ ಪರಿಹಾರವನ್ನು ಕೋರಿದ್ದೀರಾ ಎಂದರೆ ನಮ್ಮ ಆಸ್ತಿಯನ್ನು ನಮಗೆ ಕೊಡಿಸಿಕೊಡುವಂತೆ ದಾವೆಯನ್ನು ಸಲ್ಲಿಸಿದ್ದೇನೆ. ಸಾಕ್ಷಿಯು ಮುಂದುವರೆದು ನಾವೇ ಸ್ವಾಧೀನದಲ್ಲಿ ಇದ್ದೇವೆ ಆದರೂ ಸ್ವಾಧೀನವನ್ನು ಕೊಡಿಸಿಕೊಡುವಂತೆ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಆಸ್ತಿ ಮನೆ ಮತ್ತು ಸೈಟ್‌ನ್ನು ಒಳಗೊಂಡಿರುತ್ತದೆ. ಮನೆ ಮತ್ತು ಸೈಟ್ ಯಾರ ಹೆಸರಿನಲ್ಲಿ ಇದೆ ಎಂದರೆ ಈಗಲು ನನ್ನ ತಾತಾ ಸಿದ್ದಚಾರ್ ರವರ ಹೆಸರಿನಲ್ಲಿರುತ್ತದೆ. ಆ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ. ನ್ಯಾಯಾಲಯಕ್ಕೆ ಹಾಜರು ಮಾಡಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇದೆಯೇ ಎಂದರೆ ಇರುವುದಿಲ್ಲ.

ನನ್ನ ತಂದೆ **2009** ರಲ್ಲಿ ಸಲ್ಲಿಸಿದ್ದ ದಾವೆಯ ತೀರ್ಮಾನದ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿದ್ದೇನೆ ಅದು ಚಾಲ್ತಿಯಲ್ಲಿರುತ್ತದೆ. ಸದರಿ ದಾವೆಯಲ್ಲಿ ಯಾವ ಆಸ್ತಿಯನ್ನು ಸೇರಿಸಲಾಗಿದೆ ಎಂದರೆ ಪ್ರಸ್ತುತ ದಾವೆಯ ಆಸ್ತಿಯನ್ನೇ ಸೇರಿಸಲಾಗಿದೆ. ಅದು ಸರ್ವೆ ನಂಃ **31/1** ಆಗಿರುತ್ತದೆ. ಸದರಿ ದಾವೆಯಲ್ಲಿಯೂ ಸಹ ನನ್ನ ತಂದೆ ನಾನು ಮಾಲೀಕನೆಂದು ಘೋಷಿಸಬೇಕೆಂದು ಮತ್ತು ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸಿದ್ದಚಾರಿಯವರಿಗೆ **7** ಜನ ಮಕ್ಕಳು. ಸದರಿ

ಸಿದ್ದಚಾರಿಯವರ ಮಕ್ಕಳ ನಡುವೆ ವಿಭಾಗವಾಗಿದೆಯೇ ಎಂದರೆ ಸರ್ವೆ ನಂಃ **31/1** ಕ್ಕೆ ಸಂಬಂಧಿಸಿದಂತೆ ವಿಭಾಗವಾಗಿರುವುದಿಲ್ಲ. ಸಿದ್ದಚಾರಿಯವರ 7 ಮಕ್ಕಳು ಅಥವಾ ಅವರ ವಾರಸುದಾರರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ. **2006** ರಲ್ಲಿಯೇ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆಗೆ ಮಾಲೀಕತ್ವದ ಹಕ್ಕು ಇಲ್ಲವೆಂದು ತಕರಾರು ಮಾಡಿದ್ದು **2009** ರಲ್ಲಿಯೇ ಪ್ರಸ್ತುತ ದಾವೆಯನ್ನು ಸಲ್ಲಿಸಲು ತೊಂದರೆ ಇತ್ತೇ ಎಂದರೆ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು **2014** ರಲ್ಲಿ ಪ್ರತಿವಾದಿಗಳು ಪುನಃ ಗಲಾಟೆಯನ್ನು ಮಾಡಿರುತ್ತಾರೆ. ಆದ್ದರಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ.

ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ತಿಳಿಸಿದ್ದು ಸದರಿ ವಿಚಾರ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ನನ್ನ ತಾತನ ಜೀವಿತ ಅವಧಿಯಲ್ಲಿಯೇ ಈ ವಿಚಾರ ಗೊತ್ತಾಗಿರುತ್ತದೆ. ನನ್ನ ತಾತಾ ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ. ನಾವು ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ, ಆದರೂ ಮಾರಾಟ ಮಾಡಿದ್ದಾರೆ ಎಂದು ಹೇಳುವ ವಿಚಾರವಾಗಿ ಯಾವುದಾದರೂ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.